ಪಾಠ 9

# ಒಂದು ಸಂತೋಷವುಳ್ಳ ಮನೆಯನ್ನಾಗಿರಿಸಿ ಕೊಳ್ಳುವುದು ಹೇಗೆ



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು**

ನಿಮ್ಮ ಕುಟುಂಬದವರ ರಕ್ಷಣೆಗಾಗಿ ಪ್ರಾರ್ಥಿಸಿರಿ ಮತ್ತು ಕೆಲಸಮಾಡಿರಿ
ಮನೆಯಲ್ಲಿ ಒಬ್ಬ ಉತ್ತಮ ಶಿಷ್ಯರಾಗಿರಿ
ನಿಮ್ಮ ತಪ್ಪುಗಳಿಗಾಗಿ ಕ್ಷಮೆ ಕೇಳಿರಿ
ಹರ್ಷಚಿತ್ತರಾಗಿರಿ.
ಮದುವೆಯ ಸಂಬಂಧವನ್ನು ಪವಿತ್ರವಾಗಿಡಿರಿ
ವಿಶ್ವಾಸಿಗಳನ್ನು ಮದುವೆಯಾಗಿರಿ
ಉತ್ತಮ ತಂದೆ-ತಾಯಿಗಳಾಗಿರಿ
ದೇವರನ್ನು ಪ್ರೀತಿಸುವಂತೆ ನಿಮ್ಮ ಮಕ್ಕಳಿಗೆ ಕಲಿಸಿರಿ
ನಿಮ್ಮ ಕುಟುಂಬವನ್ನು ಪ್ರೀತಿಸಿರಿ

ಈ ಲೋಕದಲ್ಲಿ ಕ್ರಿಸ್ತನಂತಹ ಮನೆ ಇರುವುದಕ್ಕಿಂತಲೂ ಹೆಚ್ಚಿನ ಯಾವ ಆಶೀರ್ವಾದವು ಇಲ್ಲ. ಇಂತಹ ಮನೆಯಲ್ಲಿ ಕ್ರಿಸ್ತನು ಯಜಮಾನನಾಗಿದ್ದಾನೆ. ಆತನ ಸಾನಿಧ್ಯವು ಸಂತೋಷ, ಶಾಂತಿ ಮತ್ತು ಪ್ರೀತಿಯನ್ನು ತುಂಬಿಸುತ್ತದೆ. ಕ್ರಿಸ್ತನಂತಹ ಮನೆಯು ಪಾಪದ ಬಿರುಗಾಳಿಯಿಂದಲೂ ಮತ್ತು ಸುತ್ತಲಿಂದ ಬರುವ ಉಪದ್ರವಗಳಿಂದಲೂ ಕಾಯುವಂತೆ ಒಂದು ಆಶ್ರಯ ಮತ್ತು ದುರ್ಗವೂ ಆಗಿದೆ. ನೀವು ದೇವರು ತನ್ನ ವಾಕ್ಯದಲ್ಲಿ ಹೇಳಿದಂತೆ ಮಾಡಿದರೆ, ನಿಮ್ಮ ಮನೆಯನ್ನು 'ಸ್ವರ್ಗದ ಒಂದು ತುಣುಕನ್ನಾಗಿ' ಮಾಡಬಹುದು.

**ನೀವು ಮಾಡಬೇಕಾದದ್ದು**

1. ನಿಮ್ಮ ಮನೆಯನ್ನು ನೀವು "ಒಂದು ಸ್ವರ್ಗದ ತುಣುಕನ್ನಾಗಿ ಮಾಡಬಹುದು" ಹೇಗೆಂದರೆ

...ಅ) ಅದನ್ನು ಸುಸಜ್ಜಿತವನ್ನಾಗಿ ಮಾಡಲು ಸಾಕಷ್ಟು ಹಣ ಇಟ್ಟುಕೊಳ್ಳಿರಿ.

...ಆ) ಸಂದರ್ಶಿಸಲು ಬರಲು ಸಾಕಷ್ಟು ಸ್ನೇಹಿತರನ್ನು ಮಾಡಿಕೊಳ್ಳಿರಿ

...ಇ) ದೇವರ ವಾಕ್ಯದ ಬೋಧನೆಯನ್ನು ಅನುಸರಿಸಿರಿ.

**ಉತ್ತರ** : 1.ಇ) ದೇವರ ವಾಕ್ಯದ ಬೋಧನೆಯನ್ನು ಅನುಸರಿಸಿರಿ.

**ನಿಮ್ಮ ಕುಟುಂಬದವರ ರಕ್ಷಣೆಗಾಗಿ ಪ್ರಾರ್ಥಿಸಿರಿ ಮತ್ತು ಕೆಲಸಮಾಡಿರಿ**

ಇದು ದೇವರ ಚಿತ್ತವೆಂದು ತಿಳಿದುಕೊಂಡು ನೀವು ನಂಬಿಕೆಯೊಡನೆ ಪ್ರಾರ್ಥಿಸಿರಿ. ತಕ್ಷಣವೇ ನಿಮ್ಮ ಕುಟುಂಬ· ರಕ್ಷಣೆ ಹೊಂದದಿರುವುದಕ್ಕಾಗಿ ಕುಂದಿ ಹೋಗಬೇಡಿರಿ. ದೇವರು ನಿಮ್ಮ ಪ್ರಾರ್ಥನೆಗೆ ಉತ್ತರಿಸುವನೆಂದು ತಿಳಿದು, ಪ್ರಾರ್ಥಿಸುತ್ತಿರಿ.

ಅಪೋಸ್ತಲರ ಕೃತ್ಯಗಳು 16:31 ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು.

**ನೀವು ಮಾಡಬೇಕಾದದ್ದು**

2. ಒಂದು ವೇಳೆ ನಿಮ್ಮ ಕುಟುಂಬದ ಇತರ ಸದಸ್ಯರು ಕೂಡಲೇ ರಕ್ಷಿಸಲ್ಪಡದಿದ್ದರೆ ನೀವು ಅವರಿಗಾಗಿ ಹೀಗೆ ಮಾಡಬೇಕು

...ಅ) ಅವರಿಗಾಗಿ ಪ್ರಾರ್ಥಿಸುತ್ತಿರಿ

...ಆ) ಅವರಿಗಾಗಿ ಪ್ರಾರ್ಥಿಸುವುದನ್ನು ನಿಲ್ಲಿಸಿರಿ

...ಇ) ದೇವರು ಅವರನ್ನು ರಕ್ಷಿಸುವುದಿಲ್ಲವೆಂದು ತಿಳಿದುಕೊಳ್ಳಿರಿ

3. ನಿಮ್ಮ ಕುಟುಂಬದ ಪ್ರತಿ ಸದಸ್ಯನಿಗಾಗಿ ಈಗಲೇ ಪ್ರಾರ್ಥಿಸಿರಿ, ಅವರಿಗಾಗಿ ಪ್ರತಿದಿನ ಪ್ರಾರ್ಥಿಸುವ ರೂಢಿಯನ್ನು ಇಟ್ಟುಕೊಳ್ಳಿರಿ

**ಉತ್ತರ** **2**. ಅ) ಅವರಿಗಾಗಿ ಪ್ರಾರ್ಥಿಸುತ್ತಿರಿ.

## ಮನೆಯಲ್ಲಿ ಉತ್ತಮ ಶಿಷ್ಯನಾಗಿರು

ಸಭೆಯಲ್ಲಿ ಒಬ್ಬ ಉತ್ತಮ ಶಿಷ್ಯನಂತೆ ನಟಿಸುವುದು ಸುಲಭ ಆದರೆ ನೀವು ಮನೆಯಲ್ಲಿ ಯಾವ ತರಹದ ವ್ಯಕ್ತಿಯಾಗಿದ್ದೀರಿ?

### ನೀವು ಮಾಡಬೇಕಾದದ್ದು

4. ಕೊಲೊಸ್ಸೆಯವರಿಗೆ 3 ಓದಿರಿ ಮತ್ತು ಈ ಬೋಧನೆಗಳನ್ನು ಎಷ್ಟರಮಟ್ಟಿಗೆ ಪರಿಶೀಲಿಸುತ್ತಿರುವಿರೆಂದು ಯೋಚಿಸಿರಿ

ನಿಮ್ಮ ಪತಿಯ ಅಥವಾ ಪತ್ನಿಯ ಕೆಲಸದ ಕುರಿತು, ನಿಮ್ಮ ಮಕ್ಕಳ ಅಥವಾ ಸಹೋದರ ಮತ್ತು ಸಹೋದರಿಯರ ಸಹಾಯದ ಕುರಿತು, ನಿಮ್ಮ ತಂದೆ-ತಾಯಿಗಳು ನಿಮಗಾಗಿ ಮಾಡಿದ ತ್ಯಾಗದ ಕುರಿತು ನೀವು ಮೆಚ್ಚಿಕೆ ತೋರಿಸುತ್ತೀರೋ?

ನೀವು ಪ್ರೀತಿಯುಳ್ಳವರೋ ಅಥವಾ ಸ್ವಾರ್ಥಿಗಳೋ? ನೀವು ತಾಳ್ಮೆಗೆಡುವವರೋ ಅಥವಾ ತಾಳ್ಮೆ, ಕ್ಷಮೆಗುಣಗಳುಳ್ಳವರೋ? ನಿರಂಕುಶಾಧಿಕಾರಿಗಳೋ ಅಥವಾ ಇತರರ ಅಭಿಪ್ರಾಯವನ್ನು ಗಮನಿಸುತ್ತಿರೋ? ನೀವು ನಿಮ್ಮ ತಂದೆತಾಯಿಗಳಿಗೆ ಗೌರವ ತೋರಿಸಿ ವಿಧೇಯರಾಗುತ್ತಿರೋ? ಅಥವಾ ಮನಸ್ಸಿಚ್ಛೆಯುಳ್ಳವರು ಮತ್ತು ಅವಿಧೇಯರೋ?

ನೀವು ಸಹಾಯ ಮಾಡುವವರು ಮತ್ತು ಉಪಕಾರಿಗಳೋ? ಅಥವಾ ಸೋಮಾರಿಗಳೋ? ನೀವು ಖಂಡಿಸದೆ ಮತ್ತು ದೂರುಹೇಳದೆ ಇತರರೊಂದಿಗೆ ಸಂತೋಷಪೂರ್ವಕವಾಗಿ ಸಹಾಕರ ಮಾಡುತ್ತಿದ್ದಿರೋ? ನೀವು ಸುಲಭವಾಗಿ ಕುಂದಿಹೋಗುತ್ತೀರೋ ಅಥವಾ ವಿಷಯಗಳು ವಿರೋಧವಾಗಿದ್ದರೂ ಪ್ರಸನ್ನತೆಯುಳ್ಳವರಾಗಿದ್ದಿರೋ? ಇತರರಿಗೆ ಸುಲಭವಾಗಿ ನಿಮ್ಮೊಂದಿಗೆ ಇರಲು ಸಾಧ್ಯವಾಗಿದೆಯೋ?

### ನೀವು ಮಾಡಬೇಕಾದದ್ದು

5. ನಿಮಗೆ ಒಂದು ಸಂತೋಷಕರವಾದ ಮನೆಯು ಬೇಕಿದ್ದಂತೆ, ದೀನತೆಯಿಂದ ನಿಮ್ಮ ಸೋಲನ್ನು ಒಪ್ಪಿಕೊಳ್ಳಿರಿ ಮತ್ತು ಅವುಗಳ ಮೇಲೆ

ಜಯಸಾಧಿಸಲು ಕರ್ತನ ಸಹಾಯ ಕೇಳಿಕೊಳ್ಳಿರಿ. ನೀವು ನಿಮ್ಮ ಭಾಗ ವನ್ನು ಮಾಡಲು ಇಷ್ಟಪಟ್ಟರೆ ಕರ್ತನು ನಿಮಗೆ ಸಹಾಯ ಮಾಡುವನು.

## ನಿಮ್ಮ ತಪ್ಪುಗಳಿಗಾಗಿ ಕ್ಷಮೆ ಕೇಳಿರಿ

ನಾವು ಯಾರಿಗೆ ತಪ್ಪು ಮಾಡಿದ್ದೇವೋ ಅವರಿಂದ ಕ್ಷಮೆಕೇಳಬೇಕೆಂದು ಯೇಸು ಬೋಧಿಸಿದ್ದಾನೆ. ನಮಗೆ ಹೀಗೆ ಮಾಡಲು ಮನಸ್ಸಿಲ್ಲದಿದ್ದರೆ, ಇದು ನಮ್ಮ ಮತ್ತು ದೇವರ ಮಧ್ಯದಲ್ಲಿರುವ ಅನ್ಯೋನತೆಗೆ ಅಡ್ಡವಾಗಿ ನಿಲ್ಲುವುದು.



"ನಾನು ನಿನ್ನೊಂದಿಗೆ ಕಠಿಣವಾಗಿ ಮಾತನಾಡಿದ್ದಕ್ಕಾಗಿ ಕ್ಷಮೆ ಕೇಳುತ್ತೇನೆ. ದಯವಿಟ್ಟು ನನ್ನನ್ನು ಕ್ಷಮಿಸು" ಅನ್ನುವುದು ಸುಲಭವಲ್ಲ ಆದರೆ ಮನೆಯನ್ನು ಸಂತೋಷವಾಗಿಡಲು ಇಂತಹ ಕಠಿಣ ಅನಿಸುವಿಕೆಗಳ ಮೇಲೆ ಹಿಡಿತ ಸಾಧಿಸುವುದು ಉತ್ತಮ. ನಿಮ್ಮಲ್ಲಿ ಕೆಟ್ಟ ಪ್ರವೃತ್ತಿ ಇದೆಯೋ? ನಿಮ್ಮ ತಪ್ಪನ್ನು ಒಪ್ಪಿಕೊಂಡು ಮತ್ತು ನಿಮಗೆ ಪ್ರಿಯರಾದವರನ್ನು ನಿಮಗಾಗಿ ಪ್ರಾರ್ಥಿಸಲು ಕೇಳುವುದರಿಂದ ನೀವು ಅದರ ಮೇಲೆ ಜಯಹೊಂದಲು ಸಾಧ್ಯವಾಗುವುದು.

> ಯಾಕೋಬ 5:16 ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ

### ನೀವು ಮಾಡಬೇಕಾದದ್ದು

6. ನಿಮ್ಮ ಮನೆಯು ಸಂತೋಷವುಳ್ಳದ್ದಾಗಿರುವುದು, ಒಂದು ವೇಳೆ ನೀವು
   ...ಅ) ಕುಟುಂಬದ ಒಬ್ಬ ಸದಸ್ಯನೊಂದಿಗೆ ನೀವು ಕಠಿಣವಾಗಿ ವರ್ತಿಸಿದ್ದರೆ ಕ್ಷಮೆಯನ್ನು ಕೇಳಿರಿ.
   ...ಆ) ಪ್ರತಿಯೊಬ್ಬರು ನಿಮ್ಮ ಕ್ಷಮೆ ಕೇಳುವಂತೆ ಮಾಡಿರಿ

...ಇ) ಪ್ರತಿಯೊಬ್ಬರಿಗೆ ನೀವು ಯಜಮಾನರೆಂದು ತೋರಿಸಿರಿ ಮತ್ತು ಅವರು ನಿಮಗೆ ಹೆದರುವಂತೆ ಮಾಡಿರಿ

7. ಯಾಕೋಬ 5:16 ಬಾಯಿಪಾಠ ಮಾಡಿರಿ

**ಉತ್ತರ** : 6.ಅ) ನಿಮ್ಮ ಕುಟುಂಬದ ಒಬ್ಬ ಸದಸ್ಯನೊಂದಿಗೆ ನೀವು ಕಠಿಣ ವಾಗಿ ವರ್ತಿಸಿದ್ದರೆ ಕ್ಷಮೆಯನ್ನು ಕೇಳಿರಿ

## ಹರ್ಷಚಿತ್ತರಾಗಿರಿ

ದೇವರಲ್ಲಿ ನಂಬಿಕೆಯಿರಲಿ, ಎಲ್ಲವೂ ಮೊಬ್ಬಾಗಿ ಕಾಣುವಾಗಲೂ ನಿಮ್ಮ ಪ್ರಾರ್ಥನೆಗಳಿಗೆ ಸಿಕ್ಕ ಉತ್ತರ ಆತನನ್ನು ಸ್ತುತಿಸಿರಿ

ನೆಹೆಮಿಯ 8:10 ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ.

ನಿಮ್ಮ ಮನೋಭಾವವನ್ನು ಅದುಮಿಡಲು ಕಠಿಣವಾಗಿದ್ದರೆ ಅಥವಾ ಒಪ್ಪಿಕೊಳ್ಳದ ಗುಣ ನಿಮ್ಮಲ್ಲಿಲ್ಲದಿದ್ದರೆ ಕುಂದಿಹೋಗಬೇಡಿರಿ. ಇದರ ಮೇಲೆ ಜಯಹೊಂದುವದಕ್ಕೆ ನೀವು ಮಾಡುತ್ತಿರುವ ಪ್ರಯಾಸಗಳು ಕರ್ತನಿಗಾಗಿ ನಿಮ್ಮಲ್ಲಿರುವ ಪ್ರೀತಿಗೆ ಒಂದು ಸಾಕ್ಷಿಯಾಗಿದೆ. ನೀವು ಆತ್ಮೀಕವಾಗಿ ಬೆಳೆಯುವಂತೆ ಆತನು ಸಹಾಯ ಮಾಡುತ್ತಿದ್ದಾನೆ. ನಿಮ್ಮ ಬೆಳವಣಿಗೆಯು ನಿಧಾನವಾಗಿ ಇದೆಯೋ? ನಿಮ್ಮನ್ನು ನೋಡಿಕೊಳ್ಳದೇ ಕರ್ತನನ್ನೇ ಹೆಚ್ಚಾಗಿ ದೃಷ್ಟಿಸಿರಿ ಮತ್ತು ಆತನು ನಿಮ್ಮ ಮನೆಯ ಸಮಸ್ಯೆಗಳನ್ನು ಹೇಗೆ ಪರಿಹರಿಸುವನೆಂದು ನೋಡಿ ಆಶ್ಚರ್ಯಪಡುವಿರಿ. ದೇವರು ನಿಮ್ಮ ಸ್ವರ್ಗದ ತಂದೆಯು, ಆತನು ನಿಮಗಾಗಿ ಚಿಂತಿಸುತ್ತಾನೆ.

## ನೀವು ಮಾಡಬೇಕಾದದ್ದು

8. ನೆಹೆಮಿಯ 8:10 ಬಾಯಿಪಾಠ ಮಾಡಿರಿ

## ಮದುವೆಯ ಸಂಬಂಧವನ್ನು ಪವಿತ್ರವಾಗಿಡಿರಿ

ಕೆಲವು ಸಮಾಜಗಳಲ್ಲಿ ಮದುವೆಯಿಲ್ಲದೆ ಜೋಡಿಗಳಾಗಿ ಜೀವಿಸುತ್ತಾರೆ. ಒಬ್ಬ ವ್ಯಕ್ತಿಯು ಶಿಷ್ಯನಾದಾಗ ತನ್ನ ಮದುವೆಯ ಸಂಬಂಧವು ಕಾನೂನು

ಒಪ್ಪಾಗಿರಬೇಕೆಂದು ಬಯಸುತ್ತಾನೆ. ಇದರಿಂದ ಸಮಾಜದಲ್ಲಿ ಆತನಿಗೆ ಒಂದು ಉತ್ತಮ ಸಾಕ್ಷಿಯಿರುವುದು ಮತ್ತು ಆತನು ಕ್ರಿಸ್ತನನ್ನು ಸನ್ಮಾನಿಸುವುದಲ್ಲದೆ ತನ್ನ ಕುಟುಂಬಕ್ಕೆ ದೇಶದ ಕಾನೂನಿನ ರಕ್ಷಣೆಯನ್ನು ನೀಡುವದು. ನಿಮಗೆ ಕಾನೂನು ಬದ್ಧ ಸಲಹೆಗಳು ಬೇಕಾದಲ್ಲಿ ನಿಮ್ಮ ಬೋಧಕರೊಂದಿಗೆ ಅದರ ಕುರಿತು ಮಾತಾಡಿರಿ. ಅವರು ತಮಗೆ ಸಾಧ್ಯವಾದ ರೀತಿಯಲ್ಲಿ ಸಹಾಯ ಮಾಡಲು ಸಂತೋಷಿಸುತ್ತಾರೆ.

ಮದುವೆಯ ಹೊರತು ಉಳಿದೆಲ್ಲ ಲೈಂಗಿಕ ಸಂಬಂಧಗಳನ್ನು ಆತನ ವಾಕ್ಯವು ಬಹಳವಾಗಿ ವಿರೋಧಿಸುತ್ತದೆ. ಮದುವೆಯಾದ ಯಾವುದೇ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯೊಂದಿಗೆ ಇಟ್ಟುಕೊಳ್ಳುವ ಕಾನೂನು ಬಾಹಿರ ಪ್ರೇಮ ಸಂಬಂಧ ಅಥವಾ ಪ್ರಣಯ ಸಂಬಂಧವನ್ನು ಆತನು ಖಚಿತವಾಗಿ ನಿಷೇಧಿಸಿದ್ದಾನೆ.

ಕ್ರಿಸ್ತನಂತಹ ಮನೆಗಿರುವ ಶ್ರೇಷ್ಠ ಆಶೀರ್ವಾದದ ಸತ್ಯ ಏನೆಂದರೆ, ಗಂಡ-ಹೆಂಡತಿಯರು ಪರಸ್ಪರ ಸಂಬಂಧದಲ್ಲಿ ಭರವಸೆಯಿಂದಿದ್ದು ತಮ್ಮ ಯೋಚನೆ, ಮಾತು ಮತ್ತು ಕಾರ್ಯಗಳಲ್ಲಿ ನಂಬಿಗಸ್ತರಾಗಿರುವುದು. ಅವರು ಕರ್ತನ ಸೇವೆಯನ್ನು ಜೊತೆಗೂಡಿ ಮಾಡಿದಂತೆ, ಅವರ ಮನೆಯು ಅನೇಕ ಮನೆಗಳನ್ನು ಹಾಳುಮಾಡಿರುವ ವಂಚನೆ, ಸಂದೇಹ, ಹೊಟ್ಟೆಕಿಚ್ಚು ಮತ್ತು ಅಪನಂಬಿಕೆಯಿಂದ ದೂರವಿಡುವುದು.

> ಇಬ್ರಿಯರಿಗೆ 13:4 ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು. ರೋಮಾಪುರದವರಿಗೆ 12:17, 1 ಪೇತ್ರ 2:12 ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿರಿ ಸಾಧಿಸಿರಿ... ನಿಮ್ಮ ನಡುವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ, ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು.

## ನೀವು ಮಾಡಬೇಕಾದದ್ದು

9. ಒಂದು ಉತ್ತಮ ಸಾಕ್ಷಿಯಾಗಿರಲು ಮತ್ತು ನಿಮ್ಮ ಮನೆಯಲ್ಲಿ ಕರ್ತನ ಆಶೀರ್ವಾದದಲ್ಲಿ ಸಂತೋಷಪಡಲು, ನೀವು ಮಾಡಬೇಕಾದದ್ದೇನೆಂದರೆ

...ಅ) ಗಂಡ-ಹೆಂಡತಿಯರಾಗಿ ಜೀವಿಸುವ ಮೊದಲು ಕಾನೂನು ಬದ್ಧವಾಗಿ ಮದುವೆಯಾಗಿರಿ.

...ಆ) ನೀವು ಪರಸ್ಪರ ಸರಿಯಾಗಿದ್ದಿರೆಂದು ತಿಳಿದುಕೊಳ್ಳಲು ನೀವು ಮದುವೆಯ ಮುಂಚಿತ ನಿಮ್ಮ ಹೃದಯರಾಣಿಯೊಂದಿಗೆ ಜೀವಿಸಿರಿ.

...ಇ) ಬ್ರಹ್ಮಚಾರಿಯಾಗಿರಿ

10. ದೇವರು ನಿಮ್ಮ ಮದುವೆಯನ್ನು ಆಶೀರ್ವದಿಸುವಂತೆ ಮತ್ತು ನಿಮ್ಮಿರ್ವರ ಪ್ರೀತಿಯನ್ನು ಆತನ ಪ್ರೀತಿಯು ಬಲಪಡಿಸುವಂತೆ ಪ್ರಾರ್ಥಿಸಿರಿ. ನೀವು ಪರಸ್ಪರ ಮಾತುಕತೆ, ಯೋಚನೆ ಮತ್ತು ಕಾರ್ಯಗಳಲ್ಲಿ ಯಾವಾಗಲೂ ನಂಬಿಗಸ್ತರಾಗಿರಲು ಪ್ರಾರ್ಥಿಸಿರಿ. ನೀವು ಪರಸ್ಪರ ಭರವಸೆಯಿಂದಿರಲು ಸಹಾಯ ಮಾಡುವಂತೆ ಪ್ರಾರ್ಥಿಸಿರಿ.

**ಉತ್ತರ** : 9. ಅ) ಗಂಡ-ಹೆಂಡತಿಯರಾಗಿ ಜೀವಿಸುವ ಮೊದಲು ಕಾನೂನು ಬದ್ಧವಾಗಿ ಮದುವೆಯಾಗಿರಿ.

## ವಿಶ್ವಾಸಿಗಳನ್ನು ಮದುವೆಯಾಗಿರಿ

ನೀವು ಈಗಾಗಲೇ ಅವಿಶ್ವಾಸಿಯನ್ನು ಮದುವೆಯಾಗಿದ್ದರೆ, ನೀವು ಅವರನ್ನು ಕ್ರಿಸ್ತನಿಗಾಗಿ ಗೆದ್ದುಕೊಳ್ಳಲು ಪ್ರಾರ್ಥಿಸಿರಿ. ನೀವು ಒಬ್ಬ ನಂಬಿಗಸ್ತ ಗಂಡನಾಗಿ ಅಥವಾ ಹೆಂಡತಿಯಾಗಿ ನಿಮ್ಮ ಮನೆಯಲ್ಲಿ ದೇವರ ಬೆಳಕಾಗಿ ಬೆಳಗಿರಿ. ಆದರೆ ನೀವು ಇನ್ನು ಒಬ್ಬಂಟಿಗರಾಗಿ, ಮದುವೆಯಾಗಬೇಕೆಂದಿದ್ದರೆ, ನೀವು ಒಬ್ಬ ವಿಶ್ವಾಸಿಯನ್ನು ಮದುವೆಯಾಗಬೇಕೆಂದು ನಿಶ್ಚಯಿಸಿರಿ. ನಿಮಗೆ ನಿಮ್ಮ ಕುಟುಂಬ ಜೀವಿತದಲ್ಲಿ ಇರಬೇಕಾದ ನಿಜವಾದ ಒಗ್ಗಟ್ಟು ಮತ್ತು ಶಾಂತಿಗೆ ಇದುವೆ ಮಾರ್ಗ.

ನೀವು ಬೇರೆ ಜಾತಿಯವರನ್ನು ಮದುವೆಯಾದರೆ ಯಾವಾಗಲೂ ಸಮಸ್ಯೆಗಳಿರುವವು. ನಿಮ್ಮ ಮಕ್ಕಳು ಧಾರ್ಮಿಕ ತರಬೇತಿಯನ್ನು ಹೊಂದುವುದನ್ನು ನೀವು ಹೇಗೆ ಒಪ್ಪುವಿರಿ? ಅವರು ಕರ್ತನ ಸೇವೆ ಮಾಡಲು ನೀವು ಹೇಗೆ ಅವರನ್ನು ಬೆಳೆಸುವಿರಿ?

ನೀವು ಕ್ರಿಸ್ತನನ್ನು ನಿಮ್ಮ ಜೀವಿತದ ಯಜಮಾನನ್ನಾಗಿ ಅಂಗೀಕರಿಸಿಕೊಂಡಿದ್ದರೆ ಮತ್ತು ನಿಮ್ಮ ಗಂಡ ಅಥವಾ ಹೆಂಡತಿಗೆ ಆತನ ಸೇವೆ ಮಾಡಲು

ಇಷ್ಟವಿಲ್ಲದಿದ್ದರೆ ನೀವು ನೀವಾಗಿಯೇ ವಿರುದ್ಧವಾದ ದಿಕ್ಕಿನಲ್ಲಿ ಹೋಗುವುದನ್ನು ಕಾಣುವಿರಿ. ನೀವು ಯಾವಾಗಲೂ ಇಕ್ಕಟ್ಟಿನಲ್ಲಿ ಇರುವಿರಿ. ಒಂದು ಕಡೆ ಎಲ್ಲಾದರಲ್ಲಿ ಕ್ರಿಸ್ತನನ್ನು ಮೆಚ್ಚಿಸಬೇಕೆಂದಿರುವುದು ಮತ್ತು ಇನ್ನೊಂದು ಕಡೆ ಎಲ್ಲಾದರಲ್ಲಿ ಕ್ರಿಸ್ತನನ್ನು ಮೆಚ್ಚಿಸಬೇಕೆಂದಿರುವುದು ಮತ್ತು ಇನ್ನೊಂದು ಕಡೆ ನಿಮ್ಮ ಜೊತೆಯವರನ್ನು ಮೆಚ್ಚಿಸಬೇಕೆಂದಿರುವುದು.

ನಾವು ಶಿಷ್ಯರಾಗಿರುವುದರಿಂದ ದೇವರನ್ನು ಮೆಚ್ಚಿಸಬೇಕೆನ್ನುತ್ತೇವೆ, ನಾವು ಆತನಿಗೆ ಉಪಯುಕ್ತರಾಗಬೇಕೆನ್ನುತ್ತೇವೆ. ಸಭೆಯ ಕೂಟಗಳಿಗೆ ಹೋಗುವುದರಿಂದ, ಇತರ ಶಿಷ್ಯರ ಅನ್ಯೋನತೆಯಲ್ಲಿ ಸಂತೋಷಿಸುವುದರಿಂದ ಮತ್ತು ಸಭೆಯ ಚಟುವಟಿಕೆಗಳಲ್ಲಿ ಪಾಲುತೆಗೆದುಕೊಳ್ಳುವುದರಿಂದ, ಮನೆಯಲ್ಲಿ ಕುಟುಂಬ ಪ್ರಾರ್ಥನೆ ಮಾಡುತ್ತಾ, ಮತ್ತು ಕುಟುಂಬವಾಗಿ ದೇವರನ್ನು ಸ್ತುತಿಸುತ್ತಾ ಆತನ ಸೇವೆ ಮಾಡಲು ನಾವು ಬಯಸುತ್ತೇವೆ.

ನಿಮಗೆ ಒಂದು ಸಂತೋಷದ ಕುಟುಂಬ ಇರಬೇಕೆಂದು ದೇವರು ಬಯಸುತ್ತಾನೆ. ಸೈತಾನನು ಅನೇಕ ಶಿಷ್ಯರ ಮೇಲೆ ಉಪಯೋಗಿಸಿದ ಬಲೆಯಲ್ಲಿ ನೀವು ಸಿಕ್ಕಿಕೊಳ್ಳಬಾರದೆಂದು ಆತನು ಇಚ್ಛಿಸುತ್ತಾನೆ. ದೇವರು ಖಂಡಿತವಾಗಿ ನೀವು ಅವಿಶ್ವಾಸಿಯನ್ನು ಮದುವೆಯಾಗಬಾರದೆಂದು ಎಚ್ಚರಿಸುತ್ತಾನೆ.

> 2 ಕೊರಿಂಥದವರಿಗೆ 6:14 ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು?

### ನೀವು ಮಾಡಬೇಕಾದದ್ದು

11. ಒಬ್ಬ ವಿಶ್ವಾಸಿಯು ಯಾವುದೇ ಅವಿಶ್ವಾಸಿಯನ್ನು ಮದುವೆಯಾಗುವುದು

... ಅ) ಅವರನ್ನು ಕರ್ತನಿಗಾಗಿ ಗೆಲ್ಲುವುದಕ್ಕೆ ಒಂದು ಉತ್ತಮ ಮಾರ್ಗವು.

...ಆ) ಅವರು ಪರಸ್ಪರ ಪ್ರೀತಿಯಿದ್ದರೆ ಸಾಕು

...ಇ) ಕರ್ತನ ಆಜ್ಞೆಗೆ ಅವಿಧೇಯರಾದ ಹಾಗೆ

ಉತ್ತರ : 11.ಇ) ಕರ್ತನ ಆಜ್ಞೆಗೆ ಅವಿಧೇಯರಾದ ಹಾಗೆ

## ಉತ್ತಮ ತಂದೆ-ತಾಯಿಗಳಾಗಿರಿ

ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಉತ್ತಮ ರೀತಿಯಲ್ಲಿ ಬೆಳೆಸಲು ದೇವರಿಗೆ ಜವಾಬ್ದಾರರಾಗಿದ್ದಾರೆ. ತಂದೆಯಾದವನು ಮನೆಯ ಯಜಮಾನನಾಗಿರುವುದರಿಂದ ಕುಟುಂಬದ ಭೌತಿಕ ಮತ್ತು ಆತ್ಮೀಕ ಅಗತ್ಯತೆಗಳನ್ನು ಪೂರೈಸಬೇಕು. ತಾಯಿಯೂ ಸಹ ಮಕ್ಕಳಿಗೆ ಅಗತ್ಯವಾದ ಪ್ರೀತಿಯ ಸಲಹೆಯನ್ನು ಕೊಡಬೇಕು. ಸಭೆಯ ಚಟುವಟಿಕೆಗಳು ತಂದೆ-ತಾಯಿಗಳ ಕುಟುಂಬದ ಜವಾಬ್ದಾರಿಕೆಯಿಂದ ಬಿಡುಗಡೆ ಮಾಡಲಾರವು.

1 ತಿಮೊಥೆಯನಿಗೆ 5:8 ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬಿದವನಿಗಿಂತ ಕಡೆಯಾದವನು ಆಗಿದ್ದಾನೆ.

### ನೀವು ಮಾಡಬೇಕಾದದ್ದು

12. ತಂದೆಯು ತನ್ನ ಕುಟುಂಬವನ್ನು ಯಾವುದೇ ಕಾರಣಕ್ಕಾಗಿ ಬಿಟ್ಟುಬಿಡುವುದಾದರೆ

...ಅ) ಆವನು ದೇವರಿಗಾಗಿ ಶ್ರೇಷ್ಟ ಪ್ರತಿಷ್ಠೆಯನ್ನು ತೋರಿಸಿದ ಹಾಗೆ

...ಆ) ದೇವರು, ತನ್ನ ಕುಟುಂಬವನ್ನು ಸಲಹುವುದಕ್ಕಾಗಿ ಕೊಟ್ಟ ಹೊಣೆಯನ್ನು ನಿರ್ವಹಿಸುವಲ್ಲಿ ಸೋತ ಹಾಗೆ

**ಉತ್ತರ** : 12 ಆ) ದೇವರು, ತನ್ನ ಕುಟುಂಬವನ್ನು ಸಲಹುವುದಕ್ಕಾಗಿ ಕೊಟ್ಟ ಹೊಣೆಯನ್ನು ನಿರ್ವಹಿಸುವಲ್ಲಿ ಸೋತ ಹಾಗೆ

## ದೇವರನ್ನು ಪ್ರೀತಿಸುವಂತೆ ನಿಮ್ಮ ಮಕ್ಕಳಿಗೆ ಕಲಿಸಿರಿ

ನೀವು ನಿಮ್ಮ ಮಕ್ಕಳನ್ನು ಇನ್ನು ಚಿಕ್ಕವರಿರುವಾಗಲೇ ದೇವರನ್ನು ಪ್ರೀತಿಸುವಂತೆ ಮತ್ತು ಆತನ ವಾಕ್ಯಕ್ಕೆ ವಿಧೇಯರಾಗುವಂತೆ ಕಲಿಸಿದರೆ ಅವರು ಮುಂದೆ ದೊಡ್ಡವರಾದಾಗ ಉಂಟಾಗುವ ಅನೇಕ ಹೃದಯ ವೇದನೆಗಳಿಂದ ನೀವು ನಿಮ್ಮನ್ನು ಮತ್ತು ಅವರನ್ನು ರಕ್ಷಿಸುವಿರಿ. ಪ್ರತಿದಿನ ನಿಮ್ಮ ಕುಟುಂಬದವರನ್ನು

ದೇವರ ವಾಕ್ಯ ಓದುವುದಕ್ಕಾಗಿ ಮತ್ತು ಪ್ರಾರ್ಥಿಸುವುದಕ್ಕಾಗಿ ಒಟ್ಟುಗೂಡಿಸಿರಿ. ಪ್ರತಿಯೊಬ್ಬನು ಭಾಗ ತೆಗೆದುಕೊಳ್ಳಲಿ ಕುಟುಂಬದ ಪ್ರತಿ ಸದಸ್ಯನ ಸಮಸ್ಯೆಗಳಿಗಾಗಿ ಪ್ರಾರ್ಥಿಸಿರಿ. ದೇವರ ಆಶೀರ್ವಾದಕ್ಕಾಗಿ ಆತನನ್ನು ಸ್ತುತಿಸಿರಿ.

ಒಟ್ಟುಗೂಡಿ ಸಭೆಗೆ ಹೋಗಿರಿ. ನಿಮ್ಮ ಮಕ್ಕಳು ಎಳೆಯ ವಯಸ್ಸಿನಲ್ಲಿ ತಮ್ಮನ್ನು ದೇವರಿಗೆ ಒಪ್ಪಿಸಿಕೊಡುವಂತೆ ಪ್ರೋತ್ಸಾಹಿಸಿರಿ.

ನೀವು ಒಂದುಗೂಡಿ ದೇವರನ್ನು ಆರಾಧಿಸಿ ಸೇವೆ ಮಾಡಿದಂತೆ ಆತನ ಪ್ರೀತಿಯು ನಿಮ್ಮ ಕುಟುಂಬ ಬಾಂಧವ್ಯವನ್ನು ಬಲಗೊಳಿಸುವುದು. "ಕೂಡಿ ಪ್ರಾರ್ಥಿಸಿದ ಮನೆಯು ಕೂಡಿ ಇರುವುದು."

ಎಫೆಸದವರಿಗೆ 6:4 ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ ಕರ್ತನಿಗೆ ಮೆಚ್ಚಿಕೆಯಾಗಿರುವ ಬಾಲಶಿಕ್ಷೆಯನ್ನು ಬಾಲೋಪದೇಶವನ್ನೂ ಮಾಡುತ್ತಾ ಸಾಕಿ ಸಲಹಿರಿ

## ನೀವ ಮಾಡಬೇಕಾದದ್ದು

13. ಬಿಟ್ಟ ಸ್ಥಳಗಳನ್ನು ತುಂಬಿರಿ

    "ಕೂಡಿ..... ಮನೆಯು ಕೂಡಿ....

14. ನೀವು ತಂದೆ ಅಥವಾ ತಾಯಿಯಾಗಿದ್ದರೆ ನಿಮ್ಮ ಪ್ರತಿ ಮಗುವಿಗಾಗಿ ಈಗಲೇ ಪ್ರಾರ್ಥಿಸಿರಿ. ದೇವರು ಅವರಿಗೆ ಸಹಾಯ ಮಾಡುವಂತೆ ಪ್ರಾರ್ಥಿಸಿರಿ. ಹೆಚ್ಚಿನ ತಾಳ್ಮೆ ಮತ್ತು ತಿಳುವಳಿಕೆಗಾಗಿ ಪ್ರಾರ್ಥಿಸಿರಿ.

ಉತ್ತರ : ಪ್ರಾರ್ಥಿಸಿದ, ಇರುವುದು

## ನಿಮ್ಮ ಕುಟುಂಬವನ್ನು ಪ್ರೀತಿಸಿರಿ

"ದೇವರು ಪ್ರೀತಿಯಾಗಿದ್ದಾನೆ" ನಿಮ್ಮ ಜೀವಿತದಲ್ಲಿ ದೇವರು ಹೆಚ್ಚಾಗಿ ಇದ್ದರೆ, ಹೆಚ್ಚಿನ ಪ್ರೀತಿಯು ನಿಮ್ಮ ಕುಟುಂಬದಲ್ಲಿ ಇರುವುದು. ಹೆಚ್ಚಿನ ಪ್ರೀತಿಯು ನಿಮ್ಮ ಕುಟುಂಬದಲ್ಲಿದ್ದರೆ, ಅದು ಹೆಚ್ಚು ಸಂತೋಷಭರಿತ ವಾಗಿರುವುದು.

## ನೀವು ಮಾಡಬೇಕಾದದ್ದು

15. ನಿಮ್ಮ ಕುಟುಂಬದಲ್ಲಿ ಪರಸ್ಪರ ಪ್ರೀತಿಯು ಹೆಚ್ಚಾಗಿರಲು ಸಹಾಯ ಮಾಡುವಂತೆ ಕ್ರಿಸ್ತನನ್ನು ಪ್ರಾರ್ಥಿಸಿರಿ

16. 1 ಕೊರಿಂಥದವರಿಗೆ 13 ಓದಿರಿ ಮತ್ತು ಅದನ್ನು ನಿಮ್ಮ ಕುಟುಂಬದಲ್ಲಿ ನೀವು ಅಳವಡಿಸಲಿಕ್ಕಾಗುವಂತೆ ದೇವರ ಸಹಾಯಕ್ಕಾಗಿ ಪ್ರಾರ್ಥಿಸಿರಿ.